ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-01-1980.

# *ಆತ್ಮಿಕ ಸೈನಿಕರೊಂದಿಗೆ ಆತ್ಮಿಕ ಸೇನಾಧಿಪತಿಯ ವಾರ್ತಾಲಾಪ*

(रूहानी सेनानियों से रूहानी कमाण्डर की मुलाकात)

ಇಂದು ವಿಶೇಷವಾಗಿ ಯಾವ ಸಂಘಟನೆಯಾಗಿದೆ? ಈ ಸಂಘಟನೆಯು, ಪ್ರತಿಯೊಬ್ಬರೂ ಡಬಲ್ ಸೇವಾಧಾರಿ ಹಾಗೂ ಡಬಲ್ ಜ್ಞಾನಪೂರ್ಣರಾಗಿದ್ದಾರೆ, ಇಂದು ಇಂತಹ ಗ್ರೂಪ್‌ನ್ನು ನೋಡಿ ವತನದಲ್ಲಿ ಒಂದು ವಿಶೇಷವಾದ ಸಂವಾದ ನಡೆಯಿತು-

ಬ್ರಹ್ಮಾತಂದೆಯು ಹೇಳಿದರು- ಇವರು ನನ್ನ ವಿಶೇಷ ಭುಜಗಳಾಗಿದ್ದಾರೆ'. ಶಿವತಂದೆಯು ಹೇಳಿದರು- 'ಇವರು ನನ್ನ ರುದ್ರಮಾಲೆಯಾಗಿದ್ದಾರೆ'. ರುದ್ರಮಾಲೆಯಲ್ಲಿ ವಿಶೇಷ ಮಣಿಗಳಾಗಿದ್ದಾರೆ. ಈ ರೀತಿ ಸಂವಾದ ನಡೆಯುತ್ತಾ ಶಿವತಂದೆಯು ಬ್ರಹ್ಮಾತಂದೆಯೊಂದಿಗೆ ಕೇಳಿದರು- ತಮ್ಮ ಈ ಎಲ್ಲಾ ಭುಜಗಳು ಬಲಭುಜವಾಗಿದ್ದಾರೆಯೇ ಅಥವಾ ಎಡಭುಜಗಳೂ ಇದ್ದಾರೆಯೇ, ಬಲಭುಜ ಅರ್ಥಾತ್ ಸದಾ ಸಮಾನ, ಸ್ವಚ್ಛ ಮತ್ತು ಸತ್ಯವಾದಿಗಳು. ಅಂದಮೇಲೆ ಎಲ್ಲರೂ ಬಲಭುಜಗಳೇ ಆಗಿದ್ದಾರೆಯೇ? ಅದಕ್ಕೆ ಬ್ರಹ್ಮಾತಂದೆಯು ಮುಗುಳ್ನಕ್ಕರು, ಮತ್ತು ಮುಗುಳ್ನಗುತ್ತಾ ಹೇಳಿದರು- ಪ್ರತಿಯೊಬ್ಬರ ಲೆಕ್ಕವಂತು ತಮ್ಮಬಳಿ ಇದ್ದೇ ಇದೆ. ಯಾವಾಗ ಲೆಕ್ಕವನ್ನು ನೋಡುವ ಮಾತು ಬಂದಿತೋ ಪ್ರತಿಯೊಂದು ಮಕ್ಕಳ ಲೆಕ್ಕವು ಸನ್ಮುಖದಲ್ಲಿ ಇಮರ್ಜ್ ಆಯಿತು. ಹೇಗೆ ಇಮರ್ಜ್ ಆಯಿತು? ಒಂದು ಗಡಿಯಾರದ ರೂಪದಲ್ಲಿ ಇಮರ್ಜ್ ಆಯಿತು. ಅದರಲ್ಲಿ ಪ್ರತಿಯೊಬ್ಬರ ನಾಲ್ಕೂವಿಷಯದ ನಾಲ್ಕುಭಾಗವಿತ್ತು. ಹೇಗೆ ಇಲ್ಲಿ ಸೃಷ್ಟಿಚಕ್ರದ ಚಿತ್ರವನ್ನು ಮಾಡುತ್ತೀರೋ ಹಾಗೆಯೇ ಪ್ರತಿಯೊಂದು ಭಾಗದಲ್ಲಿ ಬೇರೆ-ಬೇರೆ ಮುಳ್ಳುಗಳನ್ನಿಡಲಾಗಿತ್ತು. ಅದರಲ್ಲಿ ಪ್ರತಿಯೊಬ್ಬರ ನಾಲ್ಕೂವಿಷಯಗಳ ಪರ್ಸೆಂಟೇಜ್ ತಿಳಿಯುತ್ತಿತ್ತು. ಎಲ್ಲರ ಲೆಕ್ಕವು ಸ್ಪಷ್ಟವಾಗಿ ಕಂಡುಬರುತ್ತಿತ್ತು. ಲೆಕ್ಕವನ್ನು ನೋಡುತ್ತಾ, ಬಾಪ್‌ದಾದಾ ಪರಸ್ಪರದಲ್ಲಿ ಮಾತನಾಡಿದರು- ಸಮಯದ ಗಡಿಯಾರ ಹಾಗೂ ಮಕ್ಕಳ ಪುರುಷಾರ್ಥದ ಎರಡೂ ಗಡಿಯಾರಗಳನ್ನು ನೋಡುತ್ತಿರುವಾಗ ಏನು ಕಾಣಿಸಿತು! ಸಮಯದ ಗಡಿಯಾರದ ಗತಿಯು ತೀವ್ರವಾಗಿತ್ತು ಮತ್ತು ಮಕ್ಕಳ ಪುರುಷಾರ್ಥದ ಗಡಿಯಾರದ ಗತಿಯು ಮೆಜಾರಿಯಲ್ಲಿ ಎರಡುಭಾಗ ಎಂದರೆ ಎರಡು ವಿಷಯಗಳ ಫಲಿತಾಂಶವು 75% ಆದರೂ ಸರಿಯಿತ್ತು. ಆದರೆ ಇನ್ನೆರೆಡು ವಿಷಯಗಳ ಪರ್ಸೆಂಟೇಜ್‌ನ ಫಲಿತಾಂಶವು ಬಹಳ ಕಡಿಮೆಯಿತ್ತು. ಆಗ ಬಾಪ್‌ದಾದಾ ಹೇಳಿದರು- ಈ ಫಲಿತಾಂಶದನುಸಾರವಾಗಿ ಎವರೆಡಿ ಗ್ರೂಪ್ ಎಂದು ಹೇಳುತ್ತೇವೆ. ಹೇಗೆ ವಿನಾಶದ ಬಟನ್‌ನ್ನು ಒತ್ತುವುದರಲ್ಲಿ ನಿಧಾನವಿದೆ, ಸೆಕೆಂಡಿನ ಆಟದ ಮಾತು ಮಾಡಲ್ಪಟ್ಟಿದೆಯೋ, ಹಾಗೆಯೇ ಸ್ಥಾಪನೆಗೆ ನಿಮಿತ್ತರಾಗಿರುವ ಮಕ್ಕಳೂ ಸಹ ಒಂದುಸೆಕೆಂಡಿನಲ್ಲಿ ತಯಾರಾಗಿಬಿಡಬೇಕು. ಈ ಸಮರ್ಥಸ್ಮೃತಿಯ ಬಟನ್ ತಯಾರಾಗಿದೆಯೇ? ಸಂಕಲ್ಪ ಮಾಡಿದಾಕ್ಷಣ ಅಶರೀರಿಯಾಗಬೇಕಷ್ಟೇ, ಸಂಕಲ್ಪ ಮಾಡಬೇಕು ಮತ್ತು ಸರ್ವರ ವಿಶ್ವಕಲ್ಯಾಣಕಾರಿ ಶ್ರೇಷ್ಠಸ್ಥಿತಿಯಲ್ಲಿ ಸ್ಥಿತರಾಗಿರುತ್ತಾ, ಸಾಕ್ಷಿದೃಷ್ಟರಾಗಿರುತ್ತಾ ವಿನಾಶದ ಲೀಲೆಯನ್ನೂ ನೋಡಲು ಸಾಧ್ಯವಾಗಬೇಕು. ದೇಹದ ಸರ್ವ ಆಕರ್ಷಣೆ ಅಂದರೆ ಸಂಬಂಧ, ಪದಾರ್ಥ, ಸಂಸ್ಕಾರವೆಲ್ಲದರ ಆಕರ್ಷಣೆಯಿಂದ ದೂರ, ಪ್ರಕೃತಿಯ ಏರುಪೇರಿನ ಆಕರ್ಷಣೆಯಿಂದ ದೂರ, ಫರಿಶ್ತೆಯಾಗಿ ಶ್ರೇಷ್ಠಸ್ಥಿತಿಯಲ್ಲಿ ಸ್ಥಿತರಾಗಿದ್ದು, ಶಾಂತಿ ಮತ್ತು ಶಕ್ತಿಯ ಕಿರಣಗಳನ್ನು ಸರ್ವಾತ್ಮರಪ್ರತಿ ಕೊಡಲು ಸಾಧ್ಯವಾಗಬೇಕು- ಇಂತಹ ಸ್ಮೃತಿಯ ಸಮರ್ಥವಾದ ಬಟನ್ ತಯಾರಾಗಿದೆಯೇ? ಯಾವಾಗ ಎರಡು ಬಟನ್ ಗಳು ತಯಾರಾಗುತ್ತವೆಯೋ, ಆಗಲೇ ಸಮಾಪ್ತಿಯಾಗುತ್ತದೆ.

ವತನದಲ್ಲಿ ಈ ಗ್ರೂಪ್‌ನ್ನು ನೋಡುತ್ತಾ ಲೆಕ್ಕವು (ಚಾರ್ಟ್) ಇಮರ್ಜ್ ಆಯಿತು. ಹೇಗೆ ಬಾಹುಬಲವಿರುವ ಸೈನ್ಯದಲ್ಲಿಯೂ ವಿಭಿನ್ನ ಪ್ರಕಾರದ ಸೈನಿಕರಿರುತ್ತಾರೆ. ಕೆಲವರು ಸರಿಹದ್ದಿನಲ್ಲಿ ಹೋಗುವವರು, ಯುದ್ಧದ ಮೈದಾನದಲ್ಲಿ ಹೋಗುವವರು ಅರ್ಥಾತ್ ಡೈರೆಕ್ಟ್ ಯುದ್ಧ ಮಾಡುವವರು ಮತ್ತು ಇನ್ನೊಬ್ಬರು ಅವರ ಪಾಲನೆ ಮಾಡುವವರು ಹಿಂದೆ ಇರುತ್ತಾರೆ. ಡೈರೆಕ್ಟರ್

ಬೆನ್ನೆಲುಬಾಗಿರುತ್ತಾರೆ. ಹಾಗೆಯೇ ಈ ಗ್ರೂಪ್, ಮೈದಾನದಲ್ಲಿ ಸೇವೆ ಮಾಡುವಂತಹ ಗ್ರೂಪ್ ಆಗಿದೆ. ಮೈದಾನದಲ್ಲಿ ಬರುವಂತಹ ಸೈನ್ಯದ ಆಧಾರದ ಮೇಲೆ ವಿಜಯ ಅಥವಾ ಸೋಲಿನ ಮಾತಾಗುತ್ತದೆ. ಒಂದುವೇಳೆ ಮೈದಾನದಲ್ಲಿ ಬರುವವರು ಬಲಹೀನ, ಶಸ್ತ್ರಹೀನ, ಹೇಡಿಗಳಾಗಿದ್ದರೆ, ಎಂದೂ ಡೈರೆಕ್ಟರ್‌ನ ವಿಜಯವಾಗಲು ಸಾಧ್ಯವಿಲ್ಲ. ವಿಶ್ವಕಲ್ಯಾಣದ ಮೈದಾನದಲ್ಲಿ ಈ ಸೇವಾಧಾರಿ ಗ್ರೂಪ್ ಬೇಕಾಗಿದೆ. ಈ ಗ್ರೂಪ್ ಬಹದ್ದೂರ್ (ಶಕ್ತಿಶಾಲಿ) ಗ್ರೂಪ್ ಆಗಿದೆ. ಎದುರಿಸುವ ಶಕ್ತಿ ಅರ್ಥಾತ್ ಅನುಭವ ಮಾಡುವಂತಹ ಶಕ್ತಿ, ಶ್ರೇಷ್ಠಚರಿತ್ರೆಯ ಮೂಲಕ ಎಲ್ಲರಿಗೂ ಬಾಪ್‌ದಾದಾರವರ ಚಿತ್ರವನ್ನು ತೋರಿಸುವಂತಹ ಶಕ್ತಿ- ಇಂತಹ ಶಸ್ತ್ರಧಾರಿಯಾಗಿದ್ದೀರಾ? ಇಂತಹ ಶಕ್ತಿಸ್ವರೂಪ ಗ್ರೂಪ್ ಆಗಿದ್ದೀರಾ? ಏನೆಂದು ತಿಳಿಯುತ್ತೀರಿ. ನಾಲ್ಕೂ ವಿಷಯಗಳ ನಾಲ್ಕೂ ಅಲಂಕಾರಿಗಳಾಗಿದ್ದೀರಾ? ಎರಡುಭುಜವಿರುವ ಶಕ್ತಿ ಸ್ವರೂಪರೇ ಅಥವಾ ನಾಲ್ಕು ಭುಜವಿರುವವರೇ? ಈ ನಾಲ್ಕೂ ಅಲಂಕಾರಗಳು ನಾಲ್ಕು ವಿಷಯಗಳ ಸಂಕೇತವಾಗಿದೆ. ಅಂದಮೇಲೆ ಎಲ್ಲಾ ಅಲಂಕಾರಗಳ ಧಾರಣೆಯನ್ನು ಮಾಡಿದ್ದೀರಾ? ಅಥವಾ ಕೆಲವರು ಎರಡು ಭುಜಗಳನ್ನು ಧಾರಣೆ ಮಾಡಿ, ಇನ್ನೂ ಕೆಲವರು ಮೂರು ಭುಜವನ್ನು ಧಾರಣೆ ಮಾಡಿದ್ದೀರಾ ಅಥವಾ ಒಂದನ್ನು ಧಾರಣೆ ಮಾಡಿದರೆ ಇನ್ನೊಂದು ಕಳೆದುಹೋಗುತ್ತಿದೆಯೇ? ಅಂದಮೇಲೆ ಈ ಗ್ರೂಪ್‌ನ ಮಹತ್ವವನ್ನು ತಿಳಿದುಕೊಂಡಿದ್ದೀರಾ.

**ಶ್ರೀಮತರೂಪಿ ಮುಳ್ಳು ಸರಿಯಾಗಿದ್ದರೆ ತಕ್ಕಡಿಯ ಎರಡು ತಟ್ಟೆಗಳು ಸಮಾನವಾಗಿ ಇರುತ್ತವೆ.**

ಸೇವೆಯ ಮೈದಾನದಲ್ಲಿ ಬರುವಂತಹ ಗ್ರೂಪ್ ಅರ್ಥಾತ್ ವಿಜಯದ ಆಧಾರಮೂರ್ತಿ ಗ್ರೂಪ್ ಆಗಿದೆ. ಆಧಾರಮೂರ್ತಿಗಳು ಶಕ್ತಿಶಾಲಿಯಾಗಿದ್ದೀರಲ್ಲವೆ? ಆಧಾರವಂತು ಅಲುಗಾಡುವುದಿಲ್ಲ ತಾನೇ. ಹೇಗೆ ಜ್ಞಾನ ಮತ್ತು ಸೇವೆಯೆರಡು ವಿಷಯದ ಮೇಲೆ ಫಲಿತಾಂಶವನ್ನು 96% ನೋಡಲಾಯಿತು. ಹಾಗೆಯೇ ನೆನಪು ಮತ್ತು ಧಾರಣೆಯೆರಡು ವಿಷಯಗಳಲ್ಲಿಯೂ ಹೆಚ್ಚಿನ ಗಮನವನ್ನು ಕೊಟ್ಟು, ನಾಲ್ಕೂ ಅಲಂಕಾರಿಗಳಾಗಿರಿ, ಇಲ್ಲವೆಂದರೆ ಸೃಷ್ಟಿಯ ಆತ್ಮರಿಗೆ ಸಂಪೂರ್ಣ ಸಾಕ್ಷಾತ್ಕಾರವನ್ನು ಮಾಡಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಇವೆರಡು ಅಲಂಕಾರಗಳನ್ನು ಧಾರಣೆ ಮಾಡುವುದಕ್ಕಾಗಿ ವಿಶೇಷ ಯಾವ ಗಮನವನ್ನಿಡುತ್ತೀರಿ, ಡಬಲ್ ಸೇವಾಧಾರಿಗಳಲ್ಲವೇ? ಲೌಕಿಕ ಮತ್ತು ಈಶ್ವರೀಯ, ಶರೀರ ನಿರ್ವಹಣಾರ್ಥ ಮತ್ತು ಆತ್ಮದ ನಿರ್ವಹಣರ್ಥವಾಗಿ ಡಬಲ್ ಸೇವೆಯು ಸಿಕ್ಕಿದೆ ಮತ್ತು ಎರಡೂ ಸೇವೆಗಳು ಬಾಪ್‌ದಾದಾರವರ ಡೈರೆಕ್ಷನ್ ಅನುಸಾರವಾಗಿ ಸಿಕ್ಕಿರುವುದಾಗಿದೆ. ಆದರೆ ಎರಡೂ ಸೇವೆಗಳಲ್ಲಿ ಸಮಯ, ಶಕ್ತಿಗಳಲ್ಲಿ ಸಮಾನವಾದ ಗಮನವನ್ನು ಕೊಡುತ್ತೀರಾ? ತಕ್ಕಡಿಯ ಎರಡೂಕಡೆಯಲ್ಲಿ ಸಮಾನತೆಯನ್ನಿಡುತ್ತೀರಾ? ಮುಳ್ಳು ಸರಿಯಾಗಿಡುತ್ತೀರಾ ಅಥವಾ ಮುಳ್ಳಿಲ್ಲದಿರುವ ತಕ್ಕಡಿಯನ್ನಿಡುತ್ತೀರಾ? ತಕ್ಕಡಿಯ ಮುಳ್ಳಾಗಿದೆ- 'ಶ್ರೀಮತ'. ಒಂದುವೇಳೆ ಶ್ರೀಮತದ ಮುಳ್ಳು ಸರಿಯಾಗಿದೆಯೆಂದರೆ ಎರಡೂಕಡೆಯಲ್ಲಿ ಸಮಾನವಾಗಿರುತ್ತದೆ ಅರ್ಥಾತ್ ತಕ್ಕಡಿಯ ಸಮಾನತೆಯು ಸರಿಯಾಗಿರುತ್ತದೆ. ಒಂದುವೇಳೆ ಮುಳ್ಳೇ ಸರಿಯಾಗಿಲ್ಲವೆಂದರೆ ಸಮಾನತೆಯಿರಲು ಸಾಧ್ಯವಿಲ್ಲ. ಕೆಲಕೆಲವು ಮಕ್ಕಳು ಒಂದುಕಡೆಯ ತೂಕವನ್ನು ಹೆಚ್ಚಿನದಾಗಿಡುತ್ತಾರೆ. ಹೇಗೆ? ಲೌಕಿಕ ಜವಾಬ್ದಾರಿಗಳನ್ನು ನಿಭಾಯಿಸಲೇಬೇಕು ಎಂದು ತಿಳಿಯುತ್ತಾರೆ ಮತ್ತು ಈಶ್ವರೀಯ ಜವಾಬ್ದಾರಿಯನ್ನು ನಿಭಾಯಿಸಬೇಕು ಎಂದು ಹೇಳುತ್ತಾರೆ. ಅದನ್ನು ನಿಭಾಯಿಸಲೇಬೇಕು ಮತ್ತು ಇದನ್ನು ನಿಭಾಯಿಸುತ್ತಿದ್ದೇವೆ. ಆದ್ದರಿಂದ ಒಂದುಕಡೆಯ ತೂಕವು ಹೆಚ್ಚಾಗಿರುತ್ತದೆ ಮತ್ತು ಫಲಿತಾಂಶವೇನಾಗುತ್ತದೆ? ಹೊರೆಯು ಅವರನ್ನೇ ಕೆಳಗೆ ತಂದುಬಿಡುತ್ತದೆ. ಮೇಲೇಳಲು ಬಿಡುವುದಿಲ್ಲ. ಹೊರೆಯಿರುವ ಕಡೆಯಲ್ಲಿ ಸದಾ ಕೆಳಗೆ ಅಂದರೆ ಧರಣಿಯಲ್ಲಿ ಮುಟ್ಟುತ್ತದೆ ಮತ್ತು ಹಗುರವಾಗಿರುವುದು ಮೇಲೆ ಹೋಗುತ್ತದೆ. ಮತ್ತು ಸಮಾನವಿರುವವರೂ ಸಹ ಮೇಲಿರುತ್ತಾರೆ, ಕೆಳಗೆ ಧರಣಿಗೆ ಮುಟ್ಟುವುದಿಲ್ಲ. ಧರಣಿಗೆ ನಾಟುವ ಕಾರಣದಿಂದ ಧರಣಿಯ ಆಕರ್ಷಣೆಗೆ ವಶವಾಗಿಬಿಡುತ್ತದೆ. ಹೊರೆಯಿರುವ ಕಾರಣದಿಂದ ಈಶ್ವರೀಯ ಸೇವೆಯ ಮೈದಾನದಲ್ಲಿ ಹಗುರವಾಗಿರುತ್ತಾ, ಸದಾ ಸಫಲತಾಮೂರ್ತಿಯಾಗಲು ಸಾಧ್ಯವಾಗುವುದಿಲ್ಲ. ಕರ್ಮದ ಬಂಧನದ, ಲೋಕಮರ್ಯಾದೆಯ ಹೊರೆಯು ಕೆಳಗೆ ಕರೆತರುತ್ತದೆ. ಯಾವ ಲೋಕವನ್ನು ಬಿಟ್ಟುಬಿಟ್ಟಿದ್ದರೋ ಆ ಲೋಕದ ಮರ್ಯಾದೆಯನ್ನಿಡುತ್ತಾರೆ ಮತ್ತು ಯಾವ ಸಂಗಮಯುಗ ಅಥವಾ ಸಂಗಮ ಲೋಕದವರಾಗಿವರೋ ಆ ಲೋಕದ

ಮರ್ಯಾದೆಯನ್ನಿಡುವುದು ಮರೆತುಹೋಗುತ್ತಾರೆ. ಯಾವ ಲೋಕವು ಭಸ್ಮವಾಗುವುದಿದೆಯೋ, ಸದಾ ಆ ಲೋಕದ ಮರ್ಯಾದೆಯನ್ನು ಸ್ಮೃತಿಯಲ್ಲಿಟ್ಟುಕೊಳ್ಳುತ್ತಾರೆ ಮತ್ತು ಯಾವ ಲೋಕವು ಅವಿನಾಶಿಯಾಗಿದೆ ಹಾಗೂ ಇದೇ ಲೋಕದಿಂದ ಭವಿಷ್ಯ ಲೋಕವಾಗುವುದಿದೆಯೋ ಆ ಲೋಕದ ಸ್ಮೃತಿಯನ್ನು ತರಿಸುತ್ತಿದ್ದರೂ ಸಹ ಕೆಲವೊಮ್ಮೆ ಮಾತ್ರ ಸ್ಮೃತಿಸ್ವರೂಪರಾಗುತ್ತಾರೆ. ಗೃಹಸ್ಥವ್ಯವಹಾರ ಮತ್ತು ಈಶ್ವರೀಯ ವ್ಯವಹಾರವೆರಡರಲ್ಲಿ ಸಮಾನತೆಯನ್ನಿಡುವುದು ಅರ್ಥಾತ್ ಸದಾ ಎರಡರಲ್ಲಿಯೂ ಹಗುರ ಮತ್ತು ಸಫಲರಾಗುವುದು.

**ಗೃಹಸ್ಥ ವ್ಯವಹಾರವಲ್ಲ ನಿಮಿತ್ತ ವ್ಯವಹಾರ.**

ವಾಸ್ತವದಲ್ಲಿ ಗೃಹಸ್ಥವ್ಯವಹಾರ ಎಂಬ ಶಬ್ದವನ್ನು ಪರಿವರ್ತನೆ ಮಾಡಬೇಕಾಗಿದೆ. ಗೃಹಸ್ಥ ಶಬ್ದವನ್ನು ಹೇಳುತ್ತಿದ್ದಂತೆಯೇ ಗೃಹಸ್ಥಿಯಾಗಿಬಿಡುತ್ತೀರಿ ಆದ್ದರಿಂದ ಗೃಹಸ್ಥಿಯಲ್ಲ, ನಿಮಿತ್ತರಾಗಿದ್ದೀರಿ. ಗೃಹಸ್ಥವ್ಯವಹಾರವಲ್ಲ, ನಿಮಿತ್ತ ವ್ಯವಹಾರವಾಗಿದೆ. ಗೃಹಸ್ಥಿಯಾದರೆ ಏನು ಮಾಡುವಿರಿ? ಗೃಹಸ್ಥಿಗಳ ಆಟವು ಯಾವುದಾಗಿದೆ? ಗೃಹಸ್ಥಿತಿಯಾದರೆ ಬಹಳ ನೆಪಗಳನ್ನು ಹೇಳುತ್ತೀರಿ. ಹೀಗೆ ಮತ್ತು ಹಾಗೆ ಎನ್ನುವ ಭಾಷೆಯನ್ನು ಬಹಳ ಮಾತನಾಡುತ್ತೀರಿ. ಹೀಗಲ್ಲವೆ, ಹಾಗಲ್ಲವೆ ಎಂದು ಮಾತನ್ನೂ ದೊಡ್ಡದನ್ನಾಗಿ ಮಾಡಲು ತೊಡಗಿಬಿಡುತ್ತೀರಿ. ಇದಂತು ತಿಳಿದಿದ್ದೀರಿ- ಮಾಡಲೇಬೇಕಾಗುತ್ತದೆ, ಇವರಂತು ಹೀಗೆಯೇ ಇರುತ್ತಾರೆ, ಹಾಗೆಯೇ.... ತಂದೆಗೂ ಈ ಪಾಠವನ್ನು ಓದಿಸಲು ತೊಡಗಿಬಿಡುತ್ತೀರಿ. ನಿಮಿತ್ತರಾಗುತ್ತೀರೆಂದರೆ ನೆಪಗಳ ಆಟವನ್ನು ಸಮಾಪ್ತಿ ಮಾಡುತ್ತಾ, ಏರುವಕಲೆಯ ಆಟವು ಪ್ರಾರಂಭವಾಗಿಬಿಡುತ್ತದೆ. ಅಂದಮೇಲೆ ಇಂದಿನಿಂದ ತಮ್ಮನ್ನು ಗೃಹಸ್ಥವ್ಯವಹಾರದವರೆಂದು ತಿಳಿಯಬಾರದು. ನಿಮಿತ್ತ ವ್ಯವಹಾರವಾಗಿದೆ. ಜವಾಬ್ದಾರನು ಬೇರೆಯಿದ್ದಾರೆ, ನಿಮಿತ್ತ ತಾವಿದ್ದೀರಿ. ಯಾವಾಗ ಇಂತಹ ಸಂಕಲ್ಪದಲ್ಲಿ ಪರಿವರ್ತನೆ ಮಾಡುತ್ತೀರೋ ಆಗ ಮಾತು ಮತ್ತು ಕರ್ಮದಲ್ಲಿ ಪರಿವರ್ತನೆಯಾಗಿಬಿಡುತ್ತದೆ. ಅಂದಮೇಲೆ ಇದೇ ಗ್ರೂಪ್‌ನಲ್ಲಿರುವ ಒಬ್ಬೊಬ್ಬರೂ ಕಮಾಲ್ ಮಾಡಬಹುದು. ಪ್ರತಿಯೊಬ್ಬರೂ ಕರ್ಮಯೋಗಿ, ಸಹಜಯೋಗಿಯ ಸ್ಯಾಂಪಲ್ ಆಗುತ್ತಾ, ಅನೇಕ ಆತ್ಮರನ್ನು ಶ್ರೇಷ್ಠ ಸಂಪಾದನೆ ಮಾಡಲು ನಿಮಿತ್ತರನ್ನಾಗಿ ಮಾಡಬಹುದು. ಮತ್ತು ಯಾರೆಲ್ಲಾ ಅಲ್ಪಕಾಲದ ಗುರುಗಳಿದ್ದಾರೆಯೋ, ಅವರಲ್ಲಿ ಒಬ್ಬ ಸಿಂಹಾಸನಾಧಿಕಾರಿ ಶಿಷ್ಯನು ಗುರುವಿನ ಹೆಸರನ್ನು ಪ್ರಸಿದ್ಧಗೊಳಿಸುತ್ತಾನೆ ಮತ್ತು ಇಲ್ಲಿ ಸದ್ಗುರುವಿಗೆ ಇಷ್ಟೆಲ್ಲರೂ ಸಿಂಹಾಸನಾಧಿಕಾರಿ ಮಕ್ಕಳಿದ್ದೀರಿ, ಒಂದೊಂದು ಮಗುವು ಎಷ್ಟೊಂದು ಶ್ರೇಷ್ಠಕಾರ್ಯವನ್ನು ಮಾಡಬಹುದು!

ಬಾಪ್‌ದಾದಾರವರು ಎಲ್ಲಾ ಮಕ್ಕಳನ್ನು ಇಂತಹ ಸೇವಾಧಾರಿ, ವಿಶ್ವದಲ್ಲಿ ಹೆಸರನ್ನು ಪ್ರಸಿದ್ಧ ಮಾಡುವಂತಹ ವಿಶ್ವಕಲ್ಯಾಣಕಾರಿ ಮಗುವೆಂದು ತಿಳಿಯುತ್ತಾರೆ. ಯಾವಾಗ ಒಂದು ದೀಪವು ದೀಪಮಾಲೆಯನ್ನೇ ಮಾಡಿಬಿಡುತ್ತದೆ ಅಂದಾಗ ತಾವು ಒಂದೊಂದು ದೀಪವು ಇಡೀ ವಿಶ್ವದಲ್ಲಿ ದೀಪಾವಳಿಯನ್ನು ಮಾಡಿಬಿಡುತ್ತೀರಿ. ತಿಳಿಯಿತೆ-

ಈ ಗ್ರೂಪ್‌ನವರು ಏನು ಮಾಡಬೇಕು. ವಿಭಿನ್ನ ಗ್ರೂಪ್‌ನವರು ವಿಭಿನ್ನ ವರ್ಗದ ಆತ್ಮರ ಸೇವಾಧಾರಿಯಾಗಿರುತ್ತಾ, ಸರ್ವರ ಸದ್ಗತಿ ಅಥವಾ ಶ್ರೇಷ್ಠಜೀವನವನ್ನಾಗಿ ಮಾಡುವ ಆಧಾರಮೂರ್ತಿಯಾಗಬೇಕು. ಹೇಗೆ ಡಬಲ್ ವಿದೇಶಿಯಾಗಿದ್ದೀರಿ ಹಾಗೆಯೇ ಡಬಲ್ ಜ್ಞಾನಪೂರ್ಣರಾಗಿದ್ದೀರಿ, ಡಬಲ್ ಸೇವಾಧಾರಿಯಾಗಿದ್ದೀರಿ. ಫಲಿತಾಂಶವೂ ಡಬಲ್ ತೆಗೆಯಬೇಕಾಗಿದೆ.

**ಈ ರೀತಿ ಸದಾ ಸರ್ವಬಂಧನಮುಕ್ತ, ಸದಾ ಜೀವನಮುಕ್ತ, ವಿಶ್ವದ ಶೋಕೇಸ್‌ನ ವಿಶೇಷ ಶೋಪೀಸ್, ವಿಶ್ವಪರಿವರ್ತನೆ ಮಾಡುವಂತಹ ಆಧಾರಮೂರ್ತಿ, ಸದಾ ಶ್ರೀಮತದ ಆಧಾರದ ಮೇಲೆ ಸ್ವ-ಉದ್ಧಾರ ಮತ್ತು ವಿಶ್ವದ ಉದ್ಧಾರ ಮಾಡುವಂತಹ ಸದಾ ವಿಶ್ವಸೇವಾಧಾರಿಗಳಿಗೆ, ಬೇಹದ್ದಿನ ಸೇವಾಧಾರಿಗಳಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-01-1980.

***ಆತ್ಮಿಕ ಸೈನಿಕರೊಂದಿಗೆ ಆತ್ಮಿಕ ಸೇನಾಧಿಪತಿಯ ವಾರ್ತಾಲಾಪ***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಡಬಲ್ ಸೇವಾಧಾರಿ ಮತ್ತು ಡಬಲ್ ಜ್ಞಾನ ಸಾಗರನು.

2. ನಾನು ಸದಾ ಸಮಾನವಾಗಿ, ಸ್ವಚ್ಛವಾಗಿ ಮತ್ತು ಸತ್ಯವಾದಿಯಾಗಿ ಇರುವ ತಂದೆಯ ಬಲಭುಜ.

3. ಸ್ಥಾಪನೆಗೆ ನಿಮಿತ್ತವಾದ ನಾನು ಒಂದು ಕ್ಷಣದಲ್ಲಿ ಸ್ಮೃತಿ ಎಂಬ ಬಟನ್‌ಅನ್ನು ತಯಾರಾಗಿಟ್ಟುಕೊಂಡು, ಸಂಕಲ್ಪ ಮಾಡಿದಾಕ್ಷಣ ಆಶರೀರಿ ಆಗಿದ್ದೇನೆ.

4. ನಾನು ವಿಶ್ವಕಲ್ಯಾಣಕಾರಿ ಎಂಬ ಶ್ರೇಷ್ಠ ಸ್ಥಿತಿಯಲ್ಲಿದ್ದು ಸಾಕ್ಷಿದೃಷ್ಟಾ ಆಗಿರುತ್ತಾ ವಿನಾಶದ ಲೀಲೆಯನ್ನು ನೋಡಿದ್ದೇನೆ.

5. ನಾನು ದೇಹದ ಸರ್ವ ಆಕರ್ಷಣೆಗಳು ಅರ್ಥಾತ್ ಸಂಬಂಧಗಳು, ಪದಾರ್ಥಗಳು, ಸಂಸ್ಕಾರಗಳು, ಪ್ರಕೃತಿಯ ಏರುಪೇರಿನ ಆಕರ್ಷಣೆಗಳಿಗೆ ಅತೀತವಾಗಿ ಮತ್ತು ಫರಿಶ್ತೆಯ ಶ್ರೇಷ್ಠ ಸ್ಥಿತಿಯಲ್ಲಿ ಶಾಂತಿ ಮತ್ತು ಶಕ್ತಿಯ ಕಿರಣಗಳನ್ನು ಸರ್ವ ಆತ್ಮರಿಗೆ ಕೊಟ್ಟಿದ್ದೇನೆ.

6. ನಾನು ನನ್ನ ಶ್ರೇಷ್ಠ ಚರಿತ್ರೆಯ ಮೂಲಕ ಬಾಪ್‌ದಾದಾರವರ ಚಿತ್ರವನ್ನು ತೋರಿಸಿದ್ದೇನೆ.